4

# ಒಡಂಬಡಿಕೆ ಹಾಗೂ ಆಜ್ಞೆ

## (ವಿಮೋಚನಕಾಂಡ 20)

ಆಗಸ್ಟ್ 2001 ರಲ್ಲಿ ಮುಖ್ಯ ನ್ಯಾಯಾಧಿಪತಿಗಳಾದ ರಾಯ್ ಮೂರ್‌ರವರು ಅಲಬಾಮದ ಉಚ್ಛ ನ್ಯಾಯಾಲಯದ ಆವರಣದಲ್ಲಿ ಐದು ಸಾವಿರ ಪೌಂಡುಗಳ ಬೆಲೆಯುಳ್ಳ ದಶಾಜ್ಞೆಗಳ ಕಲ್ಲನ್ನು ಅಳವಡಿಸುವದರ ಮೂಲಕ ಅಲಬಾಮದಲ್ಲಿ ಒಂದು ದೊಡ್ಡ ಗೊಂದಲವನ್ನೇ ಎಬ್ಬಿಸಿದರು. ತಮ್ಮ ಈ ಕ್ರಿಯೆಯನ್ನು ಪ್ರತಿಪಾದಿಸಿ, ಈ ದಶಾಜ್ಞೆಗಳೇ ಅಮೇರಿಕೆಯ ಕಾನೂನು ವ್ಯವಸ್ಥೆಗೆ ಮೂಲ ಎಂದು ಹೇಳಿದರು. ಆದ್ದರಿಂದ ಇದನ್ನು ಇಲ್ಲಿ ಇಡಲಾಗಿದೆ ಅಂದರು. ಆದರೆ, ಇದಕ್ಕೆ ವಿರುದ್ಧವಾಗಿ ನಾಗರೀಕ ನ್ಯಾಯ ಹೋರಾಟ ಮಂಡಳಿಯವರು, ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿದರು. ಸಾರ್ವಜನಿಕ ಸ್ಥಳಗಳಲ್ಲಿ ಇದನ್ನು ಸ್ಥಾಪನೆ ಮಾಡಿರುವದರಿಂದ "ಸಭೆ ಮತ್ತು ಸಾರ್ವಜನಿಕ ಆಡಳಿತ ಪ್ರತ್ಯೇಕವಾಗಿರ ಬೇಕು" ಎಂಬ ವಿಧಿಗೆ ವಿರೋಧವಾಗಿದೆ ಎಂದು ಪ್ರತಿಪಾದಿಸಿದರು. ಎರಡು ವರ್ಷಗಳ ನಂತರ ಆ ದಶಾಜ್ಞೆಗಳ ಕಲ್ಲನ್ನು ಆ ಸ್ಥಳದಿಂದ ಸ್ಥಳಾಂತರ ಮಾಡಲಾಯಿತು, ಹಾಗೂ ಮೂರ್‌ರವರನ್ನು ಸಹ ಆ ಕೆಲಸದಿಂದ ವಜ ಮಾಡಲಾಯಿತು.

ಈ ಸಂಗತಿಯು ನೀತಿ ಬಾಹಿರವಾಗಿದ್ದರು ಮೂರ್‌ರವರ ಈ ಕಾರ್ಯವು ಸಮರ್ಥನೆಗೆ ಒಳಪಟ್ಟಿತು: ಅಮೇರಿಕೆಯ ಹಾಗೂ ಅಮೇರಿಕೆಯವರ ಕಾನೂನು ವ್ಯವಸ್ಥೆಗೆ ದಶಾಜ್ಞೆಗಳೇ ಮೂಲವಾಗಿದ್ದವು ಹಾಗೂ ಅವರ ನೈತಿಕ ವ್ಯವಸ್ಥೆಗೂ ಮೂಲವಾಗಿತ್ತು. ಹೇಗಿದ್ದರೂ, ಪಾಶ್ಚಿಮಾತ್ಯ ಸಂಸ್ಕೃತಿಗೆ ದಶಾಜ್ಞೆಗಳೇ ಮುಖ್ಯ ಪಾತ್ರದಾರಿಯಾಗಿತ್ತು.

ಉದಾಹರಣೆ: ನಾವು ಯಾವುದನ್ನಾದರೂ ನಿರಂತರ ಮತ್ತು ಪಾಲಿಸಬೇಕು ಎಂಬುದಾಗಿದ್ದರೆ ಆ ಸಂಗತಿಗಳನ್ನು "ಕಲ್ಲಿನ ಮೇಲೆ ಬರೆಯಲಾಗುತ್ತದೆ." ಮೊಟ್ಟ ಮೊದಲನೆಯದಾಗಿ ದಶಾಜ್ಞೆಗಳನ್ನು ಕಲ್ಲಿನ ಮೇಲೆ ಬರೆಯಲಾಗಿತ್ತು ಎಂಬ ಉಲ್ಲೇಖವಿದೆ. ಯಾವುದೇ ದೃಢವಾದ ಬರವಣಿಗೆಯನ್ನು "ದಶಾಜ್ಞೆಗಳಿಗೆ" ಹೋಲಿಸಲಾಗುತ್ತದೆ. ವಿಷಯ ವಸ್ತು ಏನೇ ಆಗಿರಲಿ "ಇ ಮೇಲ್‌ಗಳಲ್ಲಿ ಟೆನ್ ಕಮ್ಮಾಂಡ್ ಮೆಂಟ್" ಎಂದು ಬರೆಯ ಲಾಗುತ್ತದೆ. ಚೆಂಡಿನ ಆಟ ಆಡಲು - ದಶಾಜ್ಞೆ - ಖಿನ್ನತೆ ನಿವಾರಣೆಗೆ - ದಶಾಜ್ಞೆ, ವಾಹನ ರಿಪೇರಿಗೆ ದಶಾಜ್ಞೆ - ಹೀಗೆ ಪಟ್ಟಿಯು ಮುಂದುವರೆಯುತ್ತದೆ.

ದಶಾಜ್ಞೆಗಳ ಕುರಿತು ಇಷ್ಟೊಂದು ವರ್ಚಸ್ಸನ್ನು ಗಮನಿಸುವಾಗ, ಅನೇಕರು ಅದರ ತಾತ್ಪರ್ಯವನ್ನು ಅರಿತಿರುವದಿಲ್ಲ. ಇಸ್ರಾಯೇಲ್ಯರ ಇತಿಹಾಸದಲ್ಲಿ ದಶಾಜ್ಞೆಗೆ ಇದ್ದ ಪ್ರಾಮುಖ್ಯತೆಯನ್ನು ಅರಿತಿರುವದಿಲ್ಲ. ಆ ದಶಾಜ್ಞೆಗಳನ್ನು ಇನ್ನೊಂದು ಬಾರಿ ಗಮನಿಸಿ ಅದರಲ್ಲಿರುವ ಗುಡಾರ್ಥಗಳನ್ನು ತಿಳಿದುಕೊಳ್ಳೋಣ.

### ದಶಾಜ್ಞೆಗಳ ಕುರಿತ ಸಾಮಾನ್ಯ ಪರಿಶೀಲನೆ

*ದಶಾಜ್ಞೆಗಳು ದೇವರ ಪರಿಶುದ್ಧತೆ ಹಾಗೂ ಕೃಪೆಯ ಅಭಿವ್ಯಕ್ತಿಯಾಗಿದೆ.* ಐಗುಪ್ತದಿಂದ ಪ್ರಯಾಣ ಹೊರಟ ಸಮಯದಲ್ಲಿ ಅಬ್ರಾಮ, ಇಸಾಕ ಹಾಗೂ ಯಾಕೋಬ್ಯರ ದೇವರ ವಿವರಣೆಯ ಅಗತ್ಯವನ್ನು ಹೊಂದಿದ್ದರು. ಅವರು ಸಂಪೂರ್ಣವಾದ ಅನ್ಯರ ದೇಶದಲ್ಲಿ ನಾನೂರು ವರ್ಷಗಳ ಕಾಲ ಬಂದನದಲ್ಲಿದ್ದರು. ಆ ಸಮಯದಲ್ಲಿ ಅವರಿಗೆ ದೇವಾಲಯವಾ ಗಲೀ, ಯಾಜಕರಾಗಲೀ ಅಥವಾ ಅವರನ್ನು ಆತ್ಮೀಕವಾಗಿ ನೆಡಸಲು ಲಿಖಿತ ವಾಕ್ಯವಾಗಲೀ

ಇರಲಿಲ್ಲ. ಆದ್ದರಿಂದ ಅವರು ಐಗುಪ್ತವನ್ನು ಬಿಟ್ಟು ಹೊರ ಬಂದ ನಂತರ, ಅವರ ದೇವರು ಯಾರು ಎಂಬುದಾಗಿ ಅರಿಯುವದು ಅತಿ ಪ್ರಮುಖವಾದ ವಿಚಾರವಾಗಿತ್ತು.

ಅವರನ್ನು ಐಗುಪ್ತದಿಂದ ಹೊರತಂದ ಅಲ್ಪ ಸಮಯದಲ್ಲಿಯೇ, ದೇವರು ಅವರನ್ನು ಪರ್ಯಾಯ ದ್ವೀಪದ ಬಳಿಯಲ್ಲಿದ್ದ ಸೀನಾಯಿ ಪರ್ವತದ ತಪ್ಪಲಿಗೆ ಕರೆದೊಯ್ದನು. ಅಲ್ಲಿ ಆತನು ಅವರಿಗೆ ತಾನೇ ದೇವರೆಂದು ಮತ್ತು ಅವರನ್ನು ತನ್ನ ಜನರೆಂದು ಹೇಳಿ ಒಡಂಬಡಿಕೆ ಮಾಡಿಕೊಂಡು. ಅವರು, ದೇವರು ಮೋಶೆಗೆ ಅನುಗ್ರಹಿಸಿದ್ದ ಕಟ್ಟಳೆಗಳನ್ನು ಪಾಲಿಸುವದೇ ಆ ಒಡಂಬಡಿಕೆಯ ನಿಯಮವಾಗಿತ್ತು. ಮೋಶೆಯು ದೇವರನ್ನು ಮುಖಾಮುಖಿಯಾಗಿ ಸಂಧಿಸಲು ಪರ್ವತದ ಮೇಲೆ ಹೋಗಿ, ದೇವರು ಅವನಿಗೆ ನೀಡಿದ ದಶಾಜ್ಞೆಗಳನ್ನು ತೆಗೆದುಕೊಂಡು ಕೆಳಗೆ ಬಂದನು (ಇಬ್ರಿಯ ಮೂಲ "ಹತ್ತು ನುಡಿಗಳು"). ಈ ದಶಾಜ್ಞೆಗಳನ್ನು ಕೆಲವು ಸಾರಿ "ಡೆಕೋಲಾಗ್" ಎನ್ನುವರು.

ಆ "ಹತ್ತು ನುಡಿಗಳಲ್ಲಿ" ದೇವರಲ್ಲಿರುವ ಎರಡು ಅಗತ್ಯವಾದ ಸ್ವಭಾವಗಳನ್ನು ಗಮನಿಸುತ್ತೇವೆ. ಅದು ಆತನ ಪರಿಶುದ್ಧತೆ ಹಾಗೂ ಕೃಪೆಯನ್ನು ಪ್ರಚುರಪಡಿಸುತ್ತವೆ. ಜನರು ದೇವರ ಬಳಿಗೆ ಬರುವ ಮೊದಲು ಸಿದ್ಧರಾಗಿಬರಬೇಕಿತ್ತು ಎಂದು ವಿಮೋಚನ ಕಾಂಡ 19:10-15ರಲ್ಲಿ ನೋಡುತ್ತೇವೆ. ಅವರು ತಮ್ಮನ್ನು ಸ್ವಚ್ಛಪಡಿಸಿಕೊಳ್ಳಬೇಕಿತ್ತು, ಯಾರೋಬ್ಬರು ಸಹ ಆ ಪರಿಶುದ್ಧ ಪರ್ವತವನ್ನು ಸ್ಪರ್ಶಿಸಬಾರದಿತ್ತು. ಒಂದು ವೇಳೆ ಒಂದು ಪ್ರಾಣಿ ಆ ಬೆಟ್ಟವನ್ನು ಸ್ಪರ್ಶಿಸಿದರೆ ಅದನ್ನು ಕಲ್ಲುಗಳಿಂದ ಹಾಗೂ ಬಾಣಗಳಿಂದ ಕೊಲ್ಲಬೇಕಿತ್ತು; ಯಾರೂ ಸಹ ಅದರ ಬಳಿಗೆ ಹೋಗಲು ಯತ್ನಿಸಬಾರದಿತ್ತು. ವಚನ 20 ರಿಂದ 22ರ ವರೆಗಿನ ವಾಕ್ಯದಲ್ಲಿ, ಆ ಪರಿಸರದಲ್ಲಿ ಇರಬೇಕಾದ ಪರಿಶುದ್ಧತೆಯ ಬಗ್ಗೆ ಬರೆಯಲಾಗಿದೆ: ಯಾಜಕರುಗಳಿಗೆ "ದೇವರು ತಿರುಗಿಬೀಳದಂತೆ" ಅವರು ತಮ್ಮನ್ನು ತಾವೇ ಪರಿಶುದ್ಧಗೊಳಿಸಿಕೊಳ್ಳಬೇಕಿತ್ತು (19:22). ಅತಿ ಪರಿಶುದ್ಧವಾದ ದೇವರ ಸನ್ನಿಧಿಯಲ್ಲಿ, ಆತನ ಮಹಿಮೆ ಹಾಗೂ ಪ್ರಭಾವವು ಎಂಥದ್ದು ಎಂಬುದನ್ನು ಜನರು ಅನುಭವಿಸಬೇಕಿತ್ತು.

20:1-11 ರಲ್ಲಿರುವ ಮೊದಲ ನಾಲ್ಕು ಆಜ್ಞೆಗಳು ದೇವರ ಪರಿಶುದ್ಧತೆಯ ಕುರಿತಾಗಿರುತ್ತದೆ. ಪರಿಶುದ್ಧತೆಯ ಮೂಲವೇನೆಂದರೆ, ನಿರ್ದಿಷ್ಟವಾದ ಗುಣಮಟ್ಟವಾಗಿರುತ್ತದೆ. ಇಸ್ರಾಯೇಲ್ಯರ ದೇವರನ್ನು "ಇನ್ನೊಂದು ದೇವತೆ" ಎಂದು ಅವರು ಪರಿಗಣಿಸಬಾರದಿತ್ತು. ಯಾವುದೇ ವಿಧವಾದ ದೈಹಿಕ ಅಕಾರಗಳನ್ನು ಮಾಡಿಕೊಂಡು ದೇವರಿಗೆ ಹೋಲಿಸಬಾರದಿತ್ತು. ಇತರೇ ದೇವತೆಗಳು ಈ ದೇವರ ಸಂಗಡ ಪೈಪೋಟಿ ಮಾಡಬಾರದಾಗಿತ್ತು. ಆತನ ಹೆಸರನ್ನು ಗೌರವದಿಂದ ಕಾಣಬೇಕಿತ್ತು; ಮತ್ತು ಆತನ ಸೃಷ್ಟಿಯನ್ನು ಗೌರವಿಸಬೇಕಿತ್ತು, ಆತನ ಜನರು "ಸಬ್ಬತ್‌ನ್ನು" ನೆನಪು ಮಾಡಬೇಕಿತ್ತು. ಅದನ್ನು ಪರಿಶುದ್ಧವೆಂದು ತಿಳಿಯಬೇಕಿತ್ತು. ದೇವಜನರು ಪರಿಶುದ್ಧತೆಯಲ್ಲಿ ಜೀವಿಸಬೇಕೆಂದು ದಶಾಜ್ಞೆಗಳನ್ನು ಅವರಿಗೆ ನೀಡಲಾಗಿತ್ತು. ಆತನು ಪರಿಶುದ್ಧನಾಗಿದ್ದರಿಂದ ಆತನ ಜನರು ಪರಿಶುದ್ಧವಾಗಿರಬೇಕಿತ್ತು. ನಂತರ ಒದಗಿಸಲಾದ ಕಟ್ಟಳೆಗಳಲ್ಲಿ ದಶಾಜ್ಞೆಗಳು ಪ್ರಮುಖ ಸ್ಥಾನ ಹೊಂದಿತ್ತು (ಯಾಜಕಕಾಂಡ 11:44, 45) ಮತ್ತು ಅದನ್ನು ಹೊಸ ಒಡಂಬಡಿಕೆಯಲ್ಲೂ ದಾಖಲಿಸಲಾಗಿದೆ (1 ಪೇತ್ರ 1:15, 16).

ದೇವರು ಪರಿಶುದ್ಧತೆಗಾಗಿ ಯಾವಾಗಲೂ ನಮ್ಮನ್ನು ಕರೆಯುತ್ತಾನೆ ಅದು ಆತನ ಕೃಪೆಯನ್ನೇ ಅವಲಂಭಿಸಿರುತ್ತದೆ. ದೇವರು ನಮಗಿಂತಲೂ ಶಕ್ತನಾಗಿರುವದರಿಂದ, "ದಶಾಜ್ಞೆಗಳನ್ನು" ನಮ್ಮ ಮೇಲೆ ಏರಿಸಿರುವನೆಂದು ಭಾವಿಸಬಾರದು. ಅದು ಒಂದು ಕಾನೂನಿನ ಪಟ್ಟಿ ಎಂದು ತಿಳಿಯಬಾರದು. ಅದು ಆತನ ಕೃಪಾಸ್ವಭಾವದ ಭಾವನೆಯಾಗಿರುತ್ತದೆ. ಆತನ ಕೃಪೆಯಿಂದಲೇ ಇಸ್ರಾಯೇಲ್ಯರು ದೇವ ಜನರಿಗಾಗಿ ಆಯ್ಕೆ ಗೊಂಡರು. ಕೃಪೆಯಿಂದಲೇ ಅವರನ್ನು ದಾಸತ್ವದಿಂದ ಬಿಡಿಸಿದನು (ವಿಮೋಚನಕಾಂಡ 19:4; 20:2). ಆಜ್ಞೆಗಳಲ್ಲಿ ಆತನ ಸದ್ಗುಣಗಳನ್ನು ನೋಡುತ್ತೇವೆ. ನೈತಿಕ ಗುಣಮಟ್ಟವು ಕೇವಲ ನಿಯಮಗಳಾಗಿರದೆ; ದೇವರು ಎಂಥವನು, ಹಾಗೂ ಜನರಿಂದ ಏನನ್ನು ಬಯಸುತ್ತಾನೆ ಎಂಬ ಸೂಚನೆಯು ಅದರಲ್ಲಿ

ಅಡಗಿರುತ್ತದೆ.

*ಈ ದಶಾಜ್ಞೆಗಳು ಮೇಲ್ಮುಖವಾಗಿಯೂ, ಅಡ್ಡ ಮುಖವಾಗಿಯೂ ಇರುತ್ತದೆ.* "ಮೇಲ್ಮುಖ" ಎಂದರೆ, ದೇವರೊಂದಿಗಿನ ನಮ್ಮ ಸಂಬಂಧ, ಮತ್ತು "ಅಡ್ಡ ಮುಖವೆಂದರೆ" ಇತರರೊಂದಿಗೆ ಸಂಬಂಧದ ಸೂಚನೆಯೂ ಆಗಿರುತ್ತದೆ. ಆ ಆಜ್ಞೆಗಳಲ್ಲಿನ ಮೊದಲ ನಾಲ್ಕು ಆಜ್ಞೆಗಳು. ದೇವರ ಕಡೆಗಿನ ಸಂಬಂಧವನ್ನು ತೋರಿಸುತ್ತದೆ (ಇತರೆ ದೇವರುಗಳು ಇರಬಾರದು ಇತರೆ ಆಕಾರಗಳನ್ನು ಮಾಡಿಕೊಳ್ಳಬಾರದು ದೇವರ ನಾಮದ ಗಂಭೀರ ಬಳಕೆ, ಸಬ್ಬತ್ ಆಚರಣೆಯು ಒಳಗೊಂಡಿದೆ). ಉಳಿದ ಆರು ಆಜ್ಞೆಗಳು ಜನ ಸಂಪರ್ಕದ ಕಡೆಗೆ ಇಳಿಸಲಾಗಿದೆ (ಪಿತೃಗಳಿಗೆ ಗೌರವ, ಕೊಲೆಮಾಡಬಾರದು, ವ್ಯಭಿಚಾರ ಮಾಡಬಾರದು, ಕಳ್ಳತನ ಮಾಡಬಾರದು, ಸುಳ್ಳು ಸಾಕ್ಷಿ ಹೇಳಬಾರದು, ಇನ್ನೊಬ್ಬನದನ್ನು ಆಶಿಸಬಾರದು).

ಈ ಅವಲೋಕನದಲ್ಲಿರುವ ಗುರುತಾದರೂ ಏನು? ಮೊದಲನೆಯದಾಗಿ, ನಾವು ದೇವ ರೊಂದಿಗೆ ಸರಿಯಾದ ಅನ್ಯೋನ್ಯತೆಯನ್ನು ಹಾಗೂ ಅದೇ ಸಮಯದಲ್ಲಿ ಜನರನ್ನು ಕೆಟ್ಟ ರೀತಿ ಯಲ್ಲಿ ನಡೆಸಿಕೊಳ್ಳುವದು ಸಲ್ಲ. 1 ಯೋಹಾನ 4:20ರಲ್ಲಿ, "ಒಬ್ಬನು ತಾನು ದೇವರನ್ನು ಪ್ರೀತಿ ಸುತ್ತೇನೆಂದು ಹೇಳಿ ತನ್ನ ಸಹೋದರನನ್ನು ದ್ವೇಷಿಸಿದರೆ ಅವನು ಸುಳ್ಳುಗಾರನಾಗಿದ್ದಾನೆ. ತಾನು ಕಂಡಿರುವ ತನ್ನ ಸಹೋದರನನ್ನು ಪ್ರೀತಿಸದವನು ತಾನು ಕಾಣದಿರುವ ದೇವರನ್ನು ಪ್ರೀತಿಸಲಾರನು" ಎಂದು ಯೋಹಾನನು ತಿಳಿಸಿರುವನು. ದೇವರ ಮತ್ತು ನೆರೆಹೊರೆಯವರ ಪ್ರೀತಿಯು ಸಮಾನಾಗಿರ ಬೇಕು ಎಂದು ಯೇಸು ತಿಳಿಸಿರುವನು (ಮತ್ತಾಯ 22:35-40).

ಎರಡನೆಯದಾಗಿ, ದಶಾಜ್ಞೆಗಳ ನೇರ ಹಾಗೂ ಅಡ್ಡವಾದ ಸಂಬಂಧದಲ್ಲಿ, ನಾವುಗಳು ದೇವರೊಂದಿಗೆ ಉತ್ತಮವಾದ ಬಾಂಧವ್ಯವನ್ನು ಹೊಂದಿದ್ದರೆ, ಜನರೊಂದಿಗೂ ಉತ್ತಮ ಬಾಂಧವ್ಯವನ್ನು ಹೊಂದಬಹುದು ಎಂದು ತಿಳಿಸುತ್ತದೆ. ಅನೇಕರು ತಮ್ಮ ಸಹಚರರೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಲು ಅಸಾಧ್ಯ ಏಕೆಂದರೆ ಅವರು ದೇವರೊಂದಿಗೆ ಉತ್ತಮ ಸಂಪರ್ಕದಲ್ಲಿರುವದಿಲ್ಲ. ನಾವು ದೇವರೊಂದಿಗೆ ಸಮಧಾನದಿಂದ ಇರದಿದ್ದರೆ, ಇತರರೊಂದಿಗೆ ಸಮಾಧಾನದಿಂದಿರಲು ಸಾಧ್ಯವಿಲ್ಲ (ಯಾಕೋಬ 4:1-4 ಈ ನಿಯಮದ ನಿದರ್ಶನಕ್ಕೆ ನೋಡಿರಿ).

*ಈ ಆಜ್ಞೆಗಳು ನಿಜವಾದವು ಮತ್ತು ಅವುಗಳಿಂದ ಸಂರಕ್ಷಣೆಯು ಉಂಟಾಗುತ್ತದೆ.* ದಶಾಜ್ಞೆಗಳಲ್ಲಿರುವ, ಎಂಟು ಆಜ್ಞೆಗಳು ನಕಾರಾತ್ಮಕವಾದವುಗಳು - "ನೀನು ಮಾಡಬಾರದು" ಎಂಬುದಾಗಿದೆ. ಈ ಕಾರಣದಿಂದ ದೇವರು ನಕಾರಾತ್ಮಕ ಸ್ವಭಾವದವರನ್ನು ತಿಳಿಯನು, ಇದು ನಿಜವಾಗಲು ಮನುಷ್ಯ ಸ್ವಭಾವದಲ್ಲಿರುವ ಅಂಶಗಳೇ ಎಂದು ತಿಳಿಯಬೇಕು. ನಮಗೆ ಸರಿಯಾದ ಎಚ್ಚರಿಕೆಗಳು ಇಲ್ಲದೆ ಹೋದರೆ, ನಾವು ಕೊಲ್ಲುತ್ತೇವೆ. ಕದಿಯುತ್ತೇವೆ, ಸುಳ್ಳಾಡುತ್ತೇವೆ, ಇತರೆ ಪಾಪಗಳನ್ನು ಮಾಡುತ್ತೇವೆ. ಮಾನವರ ಪಾಪದ ಕುರಿತು ಚಿಂತನೆ ಮಾಡುವಾಗ, ಮನುಷ್ಯನ ಸ್ವಶಕ್ತಿಯಿಂದ ಅವುಗಳನ್ನು ನಿರಾಕರಿಸುವದು ಅಸಾಧ್ಯ. ಆದುದರಿಂದ ನಾವು ಮಾಡುವವರೇ ಆಗಿರುವದರಿಂದ ದೇವರು ಈ ವಿಚಾರಗಳನ್ನು ನೇರ ವಾಗಿ ತಿಳಿಸಿರುವನು.

ಆಜ್ಞೆಗಳು "ಕಾಯುವಂಥವುಗಳಾಗಿವೆ" ಇದರ ನಿಮಿತ್ತ ನಾವುಗಳು ಸ್ವನಾಶದಿಂದ ಪಾರಾಗಬಹುದು. ಒಬ್ಬನು ಹೇಳಿರುವಂತೆ, "ನೀವು ದಶಾಜ್ಞೆಗಳನ್ನು ಹೆಚ್ಚಾಗಿ ಮುರಿಯದೇ ಹೋದರೂ, ನೀವು ಅವುಗಳಿಂದ ಮುರಿಯಲ್ಪಡುತ್ತೀರಿ." ಗುರುತ್ವಾಕರ್ಷಣೆ ನಿಯಮದಂತಿರುತ್ತದೆ. ನಾವು ಮೇಲಕ್ಕೆ ಎಸೆದ ವಸ್ತು ಭೂಮಿಗೆ ಹಿಂದಿರುಗುವದು ಎಂದು ಅನುಭವದಿಂದಲೂ ಮತ್ತು ವಿಜ್ಞಾನದಿಂದಲೂ ಅರಿತಿದ್ದೇವೆ. ಒಂದು ವೇಳೆ ಈ ಕಾರ್ಯವಾ ಗದೆ ಹೋದರೆ ಆ ನಿಯಮವನ್ನು ಒಬ್ಬನು ನಿರಾಕರಿಸಬಹುದು; ಆದರೆ ಒಬ್ಬನು ಕಟ್ಟಡದ ಮೇಲಿನಿಂದ ಬೀಳುವದಾದರೆ ಅವನು ತನ್ನ "ಮೂಳೆಗಳನ್ನು ಮುರಿದು ಕೊಳ್ಳುವವನಲ್ಲವೇ." ವಸ್ತುಗಳ ಗುಣದಿಂದಾಗಿ ನಿಯಮಗಳು ಇರುತ್ತವೆ. ಅದನ್ನು ಒಪ್ಪಿಕೊಂಡರೆ ಅಪಾಯದಿಂದ

ತಪ್ಪಿಸಿಕೊಳ್ಳಬಹುದು. ಆ ನಿಯಮಗಳನ್ನು ಉಲ್ಲಂಘಿಸಿದರೆ ನಾಶನ ಉಂಟಾಗುತ್ತದೆ. ಆದ್ದರಿಂದ ದೇವರು ನಮ್ಮ ಸಂರಕ್ಷಣೆಗಾಗಿ ಆಜ್ಞೆಗಳನ್ನು ನೀಡಿರುವನು. ಅದು ನಮ್ಮ ರಕ್ಷಣೆಗೂ ಮತ್ತು ದೇವರ ಘನತೆಯನ್ನು ಕಾಪಾಡುವ ಸಲುವಾಗಿಯೂ ದೇವರು ಅದನ್ನು ನಮಗೆ ನೀಡಿರುವನು.

ಇಸ್ರಾಯೇಲ್ಯರು ಐಗುಪ್ತದಿಂದ ತಪ್ಪಿಸಿಕೊಂಡು ಬಂದ ತಕ್ಷಣ, ದೇವರು ಅವರಿಗೆ ಆಜ್ಞೆಗಳನ್ನು ನೀಡುವದರ ಮೂಲಕ, ಅವರು ಸತ್ಯವಾದ ಬಿಡುಗಡೆಯನ್ನು ದೇವರಿಂದ ಮಾತ್ರ ಹೊಂದಲು ಸಾಧ್ಯ ಎಂದು ನೆನಪು ಮಾಡಿದನು, ಆಗ ಅವರು ದೇವರಿಗೆ ಮಾತ್ರ ತಮ್ಮನ್ನು ಒಪ್ಪಿಸಿಕೊಡಬೇಕಿತ್ತು. ಅವರು ದೇವರ ಮಾತಿಗೆ ಒಳಗಾಗದಿದ್ದರೆ, ಅವರು ಪುನಃ ದಾಸತ್ವಕ್ಕೆ ಒಳಪಡುವ ಸಾಧ್ಯತೆಯಿತ್ತು.

## ದಶಾಜ್ಞೆಗಳ ವಿವರಣೆ

ದಶಾಜ್ಞೆಗಳಲ್ಲಿ, ಸ್ವತಃ ಅರ್ಥವಿರುವದರಿಂದ, ಅದರ ವಿವರಣೆ ಅನಗತ್ಯವಾಗಿರಬಹುದು. ಅವುಗಳ ಅರ್ಥವನ್ನು ತಿಳಿಯುವದಕ್ಕಿಂತಲೂ, ಅದನ್ನು ಪಾಲಿಸುವದು ಯೋಗ್ಯವಾಗಿದೆ. ಕೆಲವು ವಿವರಣೆಗಳು ಮಾತ್ರ ಅಗತ್ಯವಿರಬಹುದು.

ಮೊದಲನೆಯ ಆಜ್ಞೆ, "ನಾನಲ್ಲದೆ ನಿನಗೆ ಬೇರೆ ದೇವರುಗಳು ಇರಬಾರದು" (20:3), ಅಂದರೆ ಅವರು ಎಲ್ಲಿಯವರೆಗೆ ಈ ದೇವರಿಗೆ ಪ್ರಾಮುಖ್ಯತೆಯನ್ನು ನೀಡುತ್ತಿದ್ದರೋ, ಅಲ್ಲಿಯವರೆಗೆ, ಅವರು ಇತರೆ ದೇವತೆಗಳನ್ನು ಸಹ ಆರಾಧಿಸಬಹುದು ಎಂಬ ಅರ್ಥವಿಲ್ಲ. ಅದರ ಬದಲಾಗಿ ಅವರು ಒಬ್ಬನೇ ದೇವರನ್ನು ಒಪ್ಪಿಕೊಳ್ಳಬೇಕಿತ್ತು (ಯೆಶಾಯ 44:6). ಒಬ್ಬನೇ ದೇವರನ್ನು ನಂಬುವದನ್ನು "ಏಕದೇವವಾದ" ಎನ್ನುವರು. ಮತ್ತು ಇಸ್ರಾಯೇಲ್ಯರು ಒಬ್ಬನೇ ದೇವರನ್ನು ನಂಬಿದ್ದ ಜನಾಂಗವಾಗಿದ್ದರು. ಆ ದಿವಸಗಳಲ್ಲಿ ಅವರು ಅನೇಕ ದೇವವಾದದ ಜನರ ಮಧ್ಯದಲ್ಲಿ ವಾಸಿಸುತ್ತಿದ್ದರಿಂದ, ಅವರು "ಆ ದೇವರುಗಳನ್ನು" ತಮ್ಮೊಳಗೆ "ಸೇರಿಸಿಕೊಳ್ಳುವಂಥ" ಶೋಧನೆಗೆ ಒಳಗಾಗುವ ಸಾಧ್ಯತೆಗಳಿದ್ದವು. ಆ ತಪ್ಪಿಗಾಗಿ ಅವರುಗಳು ಸರಿಯಾದ ಶಿಕ್ಷೆಯನ್ನು ಅನುಭವಿಸಿದರು ಎಂದು ಸಮುವೇಲ ಹಾಗೂ ಅರಸುಗಳ ಗ್ರಂಥಗಳಲ್ಲಿ ನೋಡುತ್ತೇವೆ.

ಎರಡನೆಯು ಆಜ್ಞೆ (20:4-6) ವಿಗ್ರಹಗಳ ಆಕಾರವನ್ನು ಆರಾಧಿಸಬಾರದು - ಹಾಗೂ ಸತ್ಯ ದೇವರ ಮೂರ್ತಿಯನ್ನು ಮಾಡಬಾರದು. ಕಾರಣವೇನೆಂದರೆ, ವ್ಯತ್ಯಾಸಗಳಿದ್ದರೂ ಪ್ರತಿಮೆಗಳ ಆಕಾರಗಳು, ಮನುಷ್ಯನ ಹೃದಯದಲ್ಲಿರುವ ಸತ್ಯ ದೇವರನ್ನು ಬದಲಿಸುವ ಸಾಧ್ಯತೆಗಳಿವೆ. ಯಾವುದೇ ವಿಗ್ರಹಗಳು, ಮಾಡಬಾರದಿತ್ತು. ಏಕೆಂದರೆ ಅವುಗಳು ದೇವರ ಸತ್ಯ ಸ್ವರೂಪವನ್ನು ತಿಳಿಸಲು ಅಸಾಧ್ಯವಾಗಿತ್ತು. ವಿಗ್ರಹಗಳು ಮನುಷ್ಯನ ಮನಸ್ಸಿನ ಕಲ್ಪನೆಯಷ್ಟೆ. ಆದರೆ ಅವನು ತಾನು ದೇವರ ಸೃಷ್ಟಿ ಎಂದು ಒಪ್ಪಿಕೊಳ್ಳ ಬೇಕು. ಒಬ್ಬನು ಒಂದು ದೇವರನ್ನು ಸೃಷ್ಟಿಸಿದ ನಂತರ, ಅದರ ಅಗತ್ಯಗಳನ್ನು ಅವನೇ ಪೂರೈಸಬೇಕು. ನಂತರ ಅವರು ತಮ್ಮದೇ ಆದ ಅಹಂಬಾವವನ್ನು ಆರಾಧಿಸುತ್ತಿದ್ದರು (ರೋಮಾಪುರ 1:18-23). ದೇವರು, ತನ್ನ ಬದಲಾಗಿ ಯಾರನ್ನೂ ನೇಮಿಸುವದಿಲ್ಲವೆಂದು ತೋರ್ಪಡಿಸಿರುವನು. ಇದು ಆತನ ಎರಡನೆಯ ಆಜ್ಞೆ. ಆತನು ತನಗೆ ಸಲ್ಲತಕ್ಕ ಗೌರವವನ್ನು ಯಾರಿಗೂ ನೀಡುವದಿಲ್ಲ - ಅಂದರೆ ಮನುಷ್ಯನ ಹಾಗೆ ಪೈಪೋಟಿಗೆ ಭಯಪಡುವವನಲ್ಲ. ತನ್ನ ಜನರು ಆತನನ್ನು ಯೋಗ್ಯನೆಂದು ತಿಳಿದುಕೊಳ್ಳ ಬೇಕು. ಆತನ ಜನರು ಆತನು ಮಾತ್ರ ಒಬ್ಬನೇ ದೇವರೆಂದು ತಿಳಿದುಕೊಳ್ಳಬೇಕು.

ವಿಮೋಚನಕಾಂಡ 20:7ರಲ್ಲಿ ದೇವರ ಹೆಸರನ್ನು ಅಯೋಗ್ಯ ಕಾರ್ಯಕ್ಕಾಗಿ ಬಳಸಬಾರದು ಎಂದು ತಿಳಿಸಲಾಗಿದೆ. "ಅಯೋಗ್ಯ" ಅಂದರೆ "ಶೂನ್ಯ" ಅಥವಾ "ಅರ್ಥರಹಿತ" "ಅರ್ಥರಹಿತವಾದ ಶಪಥಗಳನ್ನು ಮಾಡುವಾಗ ದೇವರ ಹೆಸರಿನಲ್ಲಿ ಮಾಡಬಾರದು" ಎಂಬುದೇ ದೇವರ ಅಂಶವಾಗಿದೆ - "ದೇವರ ಹೆಸರನ್ನು" ಹೇಳಿ ವಾಗ್ದಾನ

ಗಳನ್ನು ಅದನ್ನು ನೆರವೇರಿಸದೆ ಹೋದರೆ ಅದು "ವ್ಯರ್ಥವು" ಅರ್ಥ ರಹಿತವಾಗಿರುತ್ತದೆ. ಇಂಥಾ ಒಂದು ವಿಶೇಷವಾದ ಆಜ್ಞೆಯನ್ನು ಈ ದಿವಸಗಳ ಸಮಾಜವು ಉಲ್ಲಂಘನೆ ಮಾಡಿರುತ್ತದೆ!

ವಚನ 8 ರಿಂದ 11 ರವರೆಗಿನ ವಾಕ್ಯಭಾಗದಲ್ಲಿ "ಸಬ್ಬತ್ ದಿನವನ್ನು ನೆನಪು ಮಾಡಿಕೊಳ್ಳಬೇಕು" ಎಂಬುದಾಗಿದೆ. ಅದನ್ನು ಪರಿಶುದ್ಧವೆಂದು ಎಣಿಸಬೇಕು. ಅದು ದೇವರ ದಿನವೆಂದು ಆ ಆಜ್ಞೆಯೇ ವಿವರಿಸುತ್ತದೆ. ಅದು ದೇವರಿಗೆ ಮೀಸಲಾದ ದಿನವಾಗಿರ ಬೇಕು, ಆದ್ದರಿಂದ ಆ ದಿನದಲ್ಲಿ ಕೆಲಸ ಮಾಡಬಾರದು, ಆ ದಿನದ ಚಟುವಟಿಕೆಗಳನ್ನೆಲ್ಲಾ ಮೊಟಕುಗೊಳಿಸಬೇಕು. ಅದು ಇಸ್ರಾಯೇಲ್ಯರಿಗೆ ಆರಾಧನೆಯು ವಿಶ್ರಾಂತಿಯ, ಹಾಗೂ ದೇವರನ್ನು ನೆನಪು ಮಾಡುವ ದಿವಸವಾಗಿರಬೇಕು.

"ನಿನ್ನ ತಂದೆ ತಾಯಿಗಳನ್ನು ಸನ್ಮಾನಿಸಬೇಕು" (20:12) ಅದರ ಸಂಗಡ "ನೀನು ಬಹುಕಾಲ ಬದುಕುವಿ" ಎಂಬ ವಾಗ್ದಾನವನ್ನು ಸಹ ನೀಡಲಾಗಿದೆ. (ನಂತರದಲ್ಲಿ ಪೌಲನು "ವಾಗ್ದನದ ಮೊದಲನೆಯ ಆಜ್ಞೆ" ಎಂದು ತಿಳಿಸಿರುವನು ಎಫೆಸ 6:1, 2.) ವೈಯಕ್ತಿಕವಾಗಿ ಒಬ್ಬನು ಈ ವಾಗ್ದಾನವನ್ನು ನೆರವೇರಿಸುವುದಾದರೆ, ಅಂಥವನು ಬಹುಕಾಲ ಬದಕುವನು ಎಂದು ಕೆಲವರು ಬೋಧಿಸಿರುತ್ತಾರೆ. ಮೂಲ ಭೂತವಾದ ಗೌರವವನ್ನು ನೀಡದೆ ಹೋದರೆ, ಆ ಜನಾಂಗವು ಜೀವಿಸಿರಲು ಅಸಾದ್ಯ. ತಂದೆ ತಾಯಿಗಳನ್ನು ಅಗೌರವದಿಂದ ಕಾಣುವದು, ಸ್ವಾರ್ಥವಾಗಿರುತ್ತದೆ. ಅದು ಸಮಾಜದಲ್ಲಿ ಗೊಂದಲವನ್ನು ನಿರ್ಮಾಣಮಾಡಿ, ದೇಶವನ್ನು ಹಾಳುಮಾಡುತ್ತದೆ.

ವಿಮೋಚನಕಾಂಡ 20:13ರಲ್ಲಿ ನರಹತ್ಯ ಮಾಡಬಾರದು ಎಂಬ ವಿಚಾರದಲ್ಲಿ ಯುದ್ಧ ಗಳನ್ನು ಹಾಗೂ ಶಿಕ್ಷೆಯನ್ನು ಸೇರಿಸಲಾಗಿದೆಯೇ ಎಂಬುದು ಚರ್ಚೆಯ ವಿಷಯವಾಗಿದೆ. ಇಬ್ರಿಯದಲ್ಲಿ "ಕೊಲ್ಲು" ಎಂಬುದು "ಹತ್ಯೆ" ಎಂಬ ಅರ್ಥವನ್ನು ನೀಡುತ್ತದೆ. ಆದ್ದರಿಂದ ಯುದ್ಧಗಳು ಹಾಗೂ ತಪ್ಪಿಗಾಗಿ ನೀಡುವ ನ್ಯಾಯಂಗ ಶಿಕ್ಷೆಯು ಈ ವಿಚಾರದಲ್ಲಿ ಅಡಕ ವಾಗಿರುವದಿಲ್ಲ. ಹಳೆ ಒಡಂಬಡಿಕೆಯ ಉಳಿದ ಭಾಗದಲ್ಲಿ ಇಸ್ರಾಯೇಲ್ಯರು ಈ ಎರಡು ಅಂಶಗಳನ್ನು ಅಳವಡಿಸಿಕೊಂಡಿದ್ದರು ಎಂದು ನೋಡುತ್ತೇವೆ (ಅದು ದೇವರ ಆಜ್ಞೆಗನು ಗುಣವಾಗಿ).

ವಚನ 14 ರಿಂದ 16 ರವರೆಗಿನ ವಾಕ್ಯಗಳೇ. ಅದರ ಅರ್ಥವನ್ನು ನೀಡುತ್ತದೆ, ಇಸ್ರಾಯೇಲ್ಯರು ಒಂದು ಜನಾಂಗವಾಗಿ ಉಳಿಯಬೇಕಿದ್ದರೆ, ಈ ವಿಚಾರಗಳನ್ನೂ ಅನುಸರಿಸಬೇಕಿತ್ತು. ಪುನಃ ಈ ಆಜ್ಞೆಯು ನೈತಿಕ ಹಾಗೂ ನ್ಯಾಯಬದ್ಧವಾದ ಮೂಲ ಭೂತ ವಿಚಾರಗಳನ್ನು ಎತ್ತಿ ಹಿಡಿಯುತ್ತದೆ. ವ್ಯಭಿಚಾರ ಕಳ್ಳತನ ಹಾಗೂ ಸುಳ್ಳು ಸಾಕ್ಷಿಗಳು ಸಮಾಜದಲ್ಲಿನ ಐಕ್ಯತೆಯನ್ನು ಸ್ಥಿರವಾಗಿ ಇಡಲು ಅಡ್ಡಿಯಾಗಿರುತ್ತವೆ. ನಮ್ಮ ಸಮಾಜದಲ್ಲಿರುವ ಈ ಕಾರ್ಯಗಳನ್ನು ನಾವು ಗಮನಿಸುವಾಗ, ಇದರ ಪುರಾವೆಯನ್ನು ನಾವು ಗಮನಿಸಬಹುದು. ಈಮೂಲ ಭೂತ ನೈತಿಕ ಕಾರ್ಯಗಳ ಕೊರತೆ ಉಂಟಾಗುವಾಗ, ಸಮಾಜದಲ್ಲಿ ಗೊಂದಲ ಉಂಟಾಗುತ್ತದೆ.

ಹತ್ತನೆಯ ಆಜ್ಞೆ (20:17) ಮತ್ತೊಬ್ಬನದನ್ನು ಆಶಿಸಬಾರದು, ನಮ್ಮದಲ್ಲದ್ದನ್ನು ನಾವುಗಳು ಬಯಸಬಾರದು. ಈ ದುರಾಶೆಯು ಮನುಷ್ಯನನ್ನು ವ್ಯಭಿಚಾರಕ್ಕೂ, ಕಳ್ಳ ತನಕ್ಕೂ ಸುಳ್ಳು ಸಾಕ್ಷಿಗೂ, ನಂತರದಲ್ಲಿ ನರಹತ್ಯೆಗೂ ನಡೆಸುತ್ತದೆ. ಈ ಆಜ್ಞೆಗಳು ಒಂದು ವಿಧವಾದ "ಕ್ರಮಾಂಕದಲ್ಲಿರುತ್ತವೆ" ಎಂದು ಒಬ್ಬರು ತಿಳಿಸಿರುವರು. ದುರಾಶೆ ಎಂಬುದು ಕ್ರಮಾಂಕದಲ್ಲಿ ಕಡೇಯ ಸ್ಥಾನದಲ್ಲಿದ್ದರೂ, ಅದರ ಪರಿಣಾಮವು ಮೊದಲ ಆಜ್ಞೆಯಂತೆ ಮಹತ್ವದ್ದಾಗಿರುತ್ತದೆ. ಈ ಕಡೆಯ ಆಜ್ಞೆಯು ಹೃದಯದ ಪರಿಸ್ಥಿತಿಯನ್ನು ಮಾತ್ರ ತೋರಿಸುತ್ತದೆ ಎಂದು ತಿಳಿದಿದ್ದರೆ ಈ ಅಂಶವನ್ನು ಗಮನಿಸಿರಿ ಹೊಸ ಒಡಂಬಡಿಕೆಯಲ್ಲಿ ಪೌಲನು ದುರಾಶೆಯನ್ನು ಹಾಗೂ ಹೊಟ್ಟೆ ಬಾಕತನವನ್ನು ವಿಗ್ರಹರಾದನೆಗೆ ಹೋಲಿಸಿರುವನು (ಎಫೆಸ 5:5; ಕೊಲೊಸ್ಸೆ 3:5).

ಹೃದಯದ ಭಾವನೆಗಳು ಕೃತ್ಯದ ಕಡೆಗೆ ನಡೆಸುತ್ತವೆ ಎಂಬುದನ್ನು ನೆನಪಿಡಬೇಕು, ಈ ದುರಾಶೆಯ ಪರಿಣಾಮವು ಗಂಭೀರವಾದದ್ದೆ.

ದೇವರ ಈ "ಹತ್ತು ನುಡಿಗಳನ್ನು" ನಾವುಗಳು ವಿಶ್ಲೇಷಿಸಿದಾಗ, ದೇವರು ಮೋಶೆಯ ಮೂಲಕ ಒಂದು ಅಂಶವನ್ನು ಮಾತ್ರ ತಿಳಿಸಿ, ಪೂರ್ಣಭಾಗವನ್ನು ತಿಳಿದಿರುವದಿಲ್ಲ ಎಂದು ತಿಳಿಯುವದು ಅತಿ ಪ್ರಮುಖ ಸಂಗತಿಯಾಗಿರುತ್ತದೆ. ವಿಮೋಚನಕಾಂಡ 21-23 ಹಾಗೂ ಯಾಜಕಾಂಡ ಪೂರ್ಣ ಪುಸ್ತಕದಲ್ಲಿ ಅಧಿಕವಾದ ಹಾಗೂ ವಿಶಿಷ್ಟವಾದ ಆಜ್ಞೆಗಳನ್ನು ನೀಡಲಾಗಿದೆ, ಅವುಗಳು ಈ ದಶಾಜ್ಞೆಗಳಿಂಗಿಂತ ಬಹು ಪ್ರಮುಖವಾದವುಗಳೇ. ಮೋಶೆಯ ಆಜ್ಞಾ ಶಾಸ್ತ್ರವನ್ನು ಯಾವ ಕಾರಣಕ್ಕೂ ಕೀಳಾಗಿ ಕಾಣಬಾರದು. ನಾನು ದಶಾಜ್ಞೆಗಳನ್ನು ಪಾಲಿಸುತ್ತಿರುವದರಿಂದ ದೇವರೊಂದಿಗೆ "ಯೋಗ್ಯವಾದ" ಸಂಬಂಧದಲ್ಲಿ ಇದ್ದೇನೆ ಎಂದು ಒಬ್ಬನು ಹೇಳಬಾರದು. ಅದರಿಂದ ಜೀವಿಸುತ್ತಿರುವದು ಒಳ್ಳೇಯ ಅಂಭವೇ, ದೇವರೊಂದಿಗೆ ಯೋಗ್ಯವಾಗಿ ಜೀವಿಸುವದು ಅದಕ್ಕಿಂತ ಅತಿ ಪ್ರಮುಖ ವಿಚಾರವಾಗಿರುತ್ತದೆ.

## ದಶಾಜ್ಞೆಗಳನ್ನು ಈ ದಿವಸಗಳಿಗೆ ಅಳವಡಿಸಿಕೊಳ್ಳುವದು

ಬಹಳ ಕಾಲದ ಹಿಂದೆ ದಶಾಜ್ಞೆಗಳನ್ನು ನೀಡಲಾಯಿತು, ಅದನ್ನು ಒಂದು ನಿರ್ದಿಷ್ಟವಾದ ಜನಾಂಗಕ್ಕೆ ನೀಡಲಾಯಿತು. ನಮ್ಮ ಸ್ವಂತ ಸಂಸ್ಕೃತಿ ಹಾಗೂ ಇತಿಹಾಸದ ಪರಂಪರೆಯು ಅವರಿಗಿಂತ ವಿಭಿನ್ನವಾಗಿರುವದರಿಂದ ಆ ದಶಾಜ್ಞೆಗಳಿಂದ ಈ ಪ್ರಚಲಿತ ದಿನಗಳಿಗೆ ಯಾವ ಪ್ರಯೋಜನಗಳಿವೆ?

*ಮೊದಲನೆಯದಾಗಿ, ಅವುಗಳಲ್ಲಿ ನಿತ್ಯವಾದ ನೈತಿಕ ತತ್ವಗಳು ಒಳಗೊಂಡಿವೆ ಎಂಬ ನೆನಪು ಉಂಟಾಗುತ್ತದೆ.* ಈ ದಿನಗಳಿಗೆ ಅಗತ್ಯವಿರುವ "ನೈತಿಕ ಸಂಬಂಧ" ಅಂದರೆ ಯಾವುದೇ ಒಂದು ಸಂಗತಿಯನ್ನು ಅದರ ತಪ್ಪು ಒಪ್ಪುಗಳನ್ನು ನಿಕರವಾಗಿ ಹೇಳಲು ಸಾಧ್ಯವಿಲ್ಲ. ಎಲ್ಲವನ್ನು ಅವುಗಳ "ಸಂಬಂದದಲ್ಲಿ ಕಾಣಬೇಕು" ತಪ್ಪು ಒಪ್ಪುಗಳನ್ನು ಒಬ್ಬನ ವೈಯಕ್ತಿಕ ಪರಿಸ್ಥಿತಿಯ ನಿರ್ಧಾರಕ್ಕೆ ಬಿಡಲಾಗಿದೆ. ಈ ಅಲೊಚನೆಯ ಪ್ರಕಾರ ಒಬ್ಬನಿಗೆ ಅದು ಸರಿಕಂಡರೆ, ಮತ್ತೊಬ್ಬನಿಗೆ ಅದು ತಪ್ಪಾಗಿ ಕಾಣುತ್ತದೆ. ಆದ್ದರಿಂದ ಯಾವದನ್ನು ನಿಖರವಾಗಿ ಹೇಳಲಾಗದು.

ಆಜ್ಞೆಗಳು ತಿಳಿಸುವದೇನೆಂದರೆ, ಕೆಲವು ಸಂಗತಿಗಳು ಯಾವಾಗಲೂ ತಪ್ಪಾಗಿರುತ್ತವೆ, ಆದರೆ ಇತರರು ಸರಿಯಾಗಿರುತ್ತಾರೆ, ಒಬ್ಬ ವ್ಯಕ್ತಿಯು ಪರಿಸ್ಥಿತಿಗನು ಗುಣವಾಗಿರುವದಿಲ್ಲ. ಇವುಗಳೆಲ್ಲವು ದೇವರ ನ್ಯಾಯಯುತವಾದ ನಿಯಮಗಳಿಗೆ ವ್ಯತಿರಿಕ್ತವಾದ ವ್ಯಾಖ್ಯಾನಗಳಾಗಿ ರುತ್ತವೆ.

ಆಜ್ಞೆಗಳು ಈ ಗುಣಗಳುಳ್ಳವರನ್ನು ಗೊಂದಲಕ್ಕೀಡು ಮಾಡಿ, ಅವುಗಳನ್ನು ಸಾರ್ವಜನಿಕ ಭಾವನೆಗಳಿಂದ ಪ್ರತ್ಯೇಕ ಮಾಡಲು ಯತ್ನಿಸುತ್ತಾರೆ. ಅವುಗಳು ಕ್ರೈಸ್ತರಲ್ಲದ ಅಥವಾ ಯೆಹೂದ್ಯರಲ್ಲದವರ ಧಾರ್ಮಿಕ ಮನೋಭಾವಗಳನ್ನು ನೋಯಿಸುತ್ತವೆ ಎಂದು ತಿಳಿಯುತ್ತಾರೆ. ಅನೇಕ ಸಾರಿ ಕೆಲವರು ದಶಾಜ್ಞೆಗಳನ್ನು ದೂಷಿಸುವವರಾಗಿದ್ದಾರೆ, ಮತ್ತು ಅವುಗಳನ್ನು ಇಲ್ಲದಂತೆ ಮಾಡಲು ಮುಂದಾಗಿದ್ದಾರೆ. ಈ ಕುರಿತ ಈ ಕೆಳಕಂಡ ವ್ಯಾಖ್ಯಾನಗಳು ಇರುತ್ತವೆ:

> ... ಈ ನಂಬಿಕೆಗಳು ಸತ್ಯಕ್ಕೆ ದೂರವಾಗಿವೆ. ಈ ಮೊದಲ ನಾಲ್ಕು ಆಜ್ಞೆಗಳ ಪ್ರಕಾರ ವಿಶೇಷವಾದ ಆರಾಧನೆಯು ಅಗತ್ಯವಿದೆ. ಈ ದಿನಗಳಲ್ಲಿನ ಅನೇಕ ಪಂಥಿಯರು ಸಂಪ್ರದಾಯಗಳು ಇದನ್ನು ಒಪ್ಪುವದಿಲ್ಲ.
>
> ಯೆಹೋವನನ್ನು ಹೊರತುಪಡಿಸಿ ಬೇರೆ ಯಾವ ದೇವರನ್ನು ಸೇವಿಸಬಾರದೆದು ಮೊದಲ ಆಜ್ಞೆ ತಿಳಿಸುತ್ತದೆ: ಇದು ಭೌದ್ಧತತ್ವವನ್ನು (ಕೆಲ ಸಂಪ್ರದಾಯ) ಹಿಂದುತ್ವವನ್ನು

> ಸಿಕ್ಕರ ತತ್ವವನ್ನು, ವಿಶ್ವ ತತ್ವವನ್ನು ವಿರೋಧಿಸುತ್ತದೆ. ಅದು ಅಮೇರಿಕೆಯ ಮೊದಲ ನಿಯಮಾವಳಿಯಾದ ಧಾರ್ಮಿಕ ಸ್ವಾತಂತ್ರಕ್ಕೆ ವಿರೋಧವಾಗಿರುತ್ತದೆ. ಅದು ಇತರೆ ಧರ್ಮಗಳ ಸಹಿಷ್ಣತೆ ಆಗಿರುವದಿಲ್ಲ, ಅದು ಅಲ್ಪ ಸಂಖ್ಯಾತರ ವಿರುದ್ಧವಾದ ದ್ವೇಷವನ್ನು ಉಂಟುಮಾಡುತ್ತದೆ.
>
> ದಶಾಜ್ಞೆಗಳಲ್ಲಿನ ಮೊದಲ ನಾಲ್ಕು ಆಜ್ಞೆಗಳು ಯೆಹೋವ ದೇವರ ಗೌರವವನ್ನೇ ಎತ್ತಿ ಹಿಡಿಯುತ್ತದೆ, ಅದು ಇಬ್ರಿಯರ ಸ್ಥಳೀಯ ದೇವರು ಎಂದು ಕರೆದಿದ್ದಾರೆ ಇತರೆ ಆಜ್ಞೆಗಳು ಬಹಳ ಬಲಹೀನ, ಅತಿ ಬಲವುಳ್ಳದ್ದು ಅಥವಾ ಅರ್ಥರಹಿವಾದದ್ದು ಎಂದು ಹೇಳಲಾಗಿದೆ.[1]

ಕಡೆಯ ಹೇಳಿಕೆಯ ಬರಹಗಾರಳು ತನ್ನದೇ ಆದ ವ್ಯಾಖ್ಯಾನವನ್ನು ಸೇರಿಸಿ, "ಹತ್ತು ತರ್ಕ ಸಮ್ಮತವಾದ ಆಜ್ಞೆಗಳು" ಅಂದರೆ ಪ್ರಾಣಿಗಳಿಗೆ ನೀಡ ಬೇಕಾಗಿರುವ ನಿಯಮಗಳನ್ನು ಮನುಷ್ಯರಿಗೆ ನೀಡಲಾಗಿದೆ ಎಂದಿರುವಳು ಇದರ ಮೂಲಕ ಯಾರನ್ನೂ ಪರಿವರ್ತಿಸಬಾರದು, ನಂಬುವಂತೆ ಒತ್ತಾಯಿಸಬಾರದು, ನಿಮ್ಮ ಮಕ್ಕಳೂ ಸಹ ಇದರಲ್ಲಿ ಒಳಗೊಂಡಿರುವರು.

ಒಂದು ಗುಂಪು "ತನ್ನದೇ ಆದ ದಶಾಜ್ಞೆಗಳ ಬೇರೆ ನಿಯಮಗಳನ್ನು ನೀಡಿರುತ್ತದೆ, ಅದು ದೇವರ ದಶಾಜ್ಞೆಗಳಿಗೆ ಬದಲಾದ ದಶಾಜ್ಞೆಗಳಾಗಿವೆ" ಅದು ಜನರ ನಂಬಿಕೆಯನ್ನು ಬದಲಿಸುವಂಥ ಆಜ್ಞೆಗಳಾಗಿರಬೇಕು. ಅವರ ನಿರ್ಮಾಣದ ಆಜ್ಞೆಗಳಲ್ಲಿ ದೇವರ ಕುರಿತಾದ ಯಾವುದೇ ಅಂಶಗಳಿರುವದಿಲ್ಲ ಮತ್ತು ಬೇರೆ ದೇವರ ಕುರಿತಾಗಿಯೂ ಇರುವದಿಲ್ಲ! ಎರಡನೇ ವಿಧವಾದ ಅವರ ಆಜ್ಞೆಗಳು, "ನೀವು ಒಂದು ದೇವರನ್ನು ಹಿಂಬಾಲಿಸುತ್ತಿದ್ದರೆ ನಿನ್ನ ಸಂಪ್ರದಾಯಕ್ಕೆ ಅನುಗುಣವಾಗಿ ಅದನ್ನು ಆರಾಧಿಸು" ಎನ್ನುತ್ತವೆ.

ಇವುಗಳಲ್ಲಿನ ಸಾಮಾನ್ಯವಾದ ಉದ್ದೇಶಗಳು ಸ್ಪಷ್ಟವಾಗಿವೆ: ಅಲ್ಲಿರುವ ತಪ್ಪು ಒಪ್ಪುಗಳನ್ನು ಅಥವಾ ಸತ್ಯ ಹಾಗೂ ಅಸತ್ಯಗಳನ್ನು ಹಾಗೂ ಸತ್ಯಗಳನ್ನು ತಮ್ಮ ಮಕ್ಕಳಿಗೆ ಬೋಧಿಸುವದನ್ನು ಸಹ ನಿರಾಕರಿಸಲಾಗಿದೆ. ಹಾಗೂ ಈ ಬರಹದ ಬರಹಗಾರನು ಈ ಹೇಳಿಕೆಗಳಿಂದ ವಿಭಿನ್ನ ವಾಗಿದ್ದಾನೆ. ಆದರೆ ಕೆಲವು ತರ್ಕಸಮ್ಮತವಾದಿಗಳನ್ನು ಒತ್ತಾಯ ಮಾಡಲಾಗುವದಿಲ್ಲ.

ಮಾನವ ಸಮಾನದಲ್ಲಿ ಪ್ರಚಲಿತವಾಗಿರುವ ಪಾಪಗಳನ್ನು ದಶಾಜ್ಞೆಗಳು ನಿರಾಕರಿಸುತ್ತವೆ. ಈ ಕಾರಣದಿಂದ, ಯೇಸು ಕ್ರಿಸ್ತನು ಸಹ ಈ ದಶಾಜ್ಞೆಗಳನ್ನು ಪುನರಾವರ್ತಿಸಿರುವನು. ಹೊಸ ಒಡಂಬಡಿಕೆಯಲ್ಲಿನ ಅಪೊಸ್ತಲರು ಸಹ ಇವುಗಳನ್ನು ಪದೇ ಪದೇ ಹೇಳಿರುವರು, ಅಂದರೆ ಇವುಗಳು ಪ್ರಚಲಿತ ದಿವಸಗಳಲ್ಲೂ ಅನ್ವಯಿಸುತ್ತವೆ ಎಂಬ ಸೂಚನೆಗಳಾಗಿವೆ.

*ದಶಾಜ್ಞೆಗಳಿಂದ ನಮಗೆ ರಕ್ಷಣೆಯು ದೊರೆಯುತ್ತದೆ ಎಂದು ನಂಬಬಾರದು. ಇದು ಎರಡನೆಯ ಸಂಗತಿಯಾಗಿದೆ.* ಆದರೆ ಅವುಗಳು ನಮ್ಮನ್ನು ರಕ್ಷಕನ ಕಡೆಗೆ ಮಾರ್ಗಸೂಚಿಯನ್ನು ತೋರುತ್ತದೆ. ದಶಾಜ್ಞೆಗಳ ಮೂಲಕ ನಾವುಗಳು ಯೋಗ್ಯವಾದ ಜೀವಿತ ವನ್ನು ಜೀವಿಸುತ್ತಿದ್ದೇವೆ ಎಂದು ಯಾವೊಬ್ಬ ಯಥಾರ್ಥ ವ್ಯಕ್ತಿಯು ಹೇಳಲಾರನು, ಆದರೆ ನಾವು ದೇವರ ಮಹಿಮೆಯಿಂದ ಎಷ್ಟು ದೂರ ಇರುವೆವೆಂದು ತಿಳಿಸುತ್ತದೆ. ಈ ಸಂಗತಿಯನ್ನು ನಾವು ಒಂದು ಸಾರಿ ಗ್ರಹಿಸುವಾಗ, ರಕ್ಷಕನ ಅಗತ್ಯದ ಕೊರತೆಯನ್ನು ಪರಿಹರಿಸಿಕೊಳ್ಳಬಹುದು. ಇದು ಹೊಸ ಒಡಂಬಡಿಕೆಯ ಬರಹಗಾರರ ನಿಖರವಾದ ತಿಳುವಳಿಕೆಯಾಗಿತ್ತು.

> ಕ್ರಿಸ್ತನಂಬಿಕೆಯ ಕಾಲ ಬರುವದಕ್ಕೆ ಮೊದಲು ನಾವು ಮುಂದಕ್ಕೆ ಪ್ರಕಟವಾಗ ಬೇಕಾಗಿದ್ದ ಆ ನಂಬಿಕೆಗೆ ವಶವಾಗುವದಕ್ಕಾಗಿ ಧರ್ಮಶಾಸ್ತ್ರದ ಕೈಕೆಳಗೆ ಕಾವಲಲ್ಲಿ ಮುಚ್ಚಲ್ಪಟ್ಟಿದ್ದೆವು. ಹೀಗಿರಲಾಗಿ ಧರ್ಮಶಾಸ್ತ್ರವು ನಮ್ಮನ್ನು ಕಾಯುವ ಆಳಿನಂತಾಗಿದೆ; ನಾವು ನಂಬಿಕೆಯಿಂದ ನೀತಿವಂತರೆಂಬ ನಿರ್ಣಯವನ್ನು ಹೊಂದುವದಕ್ಕಾಗಿ ಕ್ರಿಸ್ತನಲ್ಲಿಗೆ ಸೇರುವ ತನಕ ಅದು ನಮ್ಮನ್ನು ಕಾಯುತ್ತದೆ. ಆದರೆ ಕ್ರೈಸ್ತ ನಂಬಿಕೆಯು ಬಂದಿರಲಾಗಿ ನಾವಿನ್ನು ಕಾಯುವವನ ಕೈಕೆಳಗಿರುವವರಲ್ಲ. ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿಟ್ಟಿರುವ

ನಂಬಿಕೆಯ ಮೂಲಕ ದೇವರ ಪುತ್ರರಾಗಿದ್ದೀರಿ. ಹೇಗಂದರೆ ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ನೀವೆಲ್ಲರು ಕ್ರಿಸ್ತನನ್ನು ಧರಿಸಿಕೊಂಡಿರಿ. ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿ ಒಂದೇ ಆಗಿರುವದರಿಂದ ಯೆಹೂದ್ಯನು ಗ್ರೀಕನು ಎಂದೂ, ಆಳು ಒಡೆಯ ಎಂದೂ, ಗಂಡು ಹೆಣ್ಣು ಎಂದೂ ಭೇದವಿಲ್ಲ (ಗಲಾತ್ಯ 3:23-28).

ಧರ್ಮಶಾಸ್ತ್ರದ ನುಡಿಗಳೆಲ್ಲವು ಆ ಶಾಸ್ತ್ರಕ್ಕೆ ಒಳಗಾದವರಿಗೇ ಹೇಳಿವೆ ಯೆಂದು ಬಲ್ಲೆವಷ್ಟೆ; ಹೀಗೆ ಎಲ್ಲರ ಬಾಯಿ ಕಟ್ಟಿಹೋಗುವದು, ಲೋಕವೆಲ್ಲಾ ದೇವರ ಮುಂದೆ ಅಪರಾಧಿಯಾಗಿ ನಿಲ್ಲುವದು. ಯಾಕಂದರೆ ಯಾವನಾದರೂ ನೇಮನಿಷ್ಠೆಗಳನ್ನನುಸರಿಸಿ ದೇವರ ಸನ್ನಿಧಿಯಲ್ಲಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ. ಧರ್ಮಶಾಸ್ತ್ರದಿಂದ ಪಾಪದ ಅರುಹು ಉಂಟಾಗುತ್ತದಷ್ಟೆ.

ಈಗಲಾದರೋ ದೇವರಿಂದ ದೊರಕುವ ನೀತಿಯು ಧರ್ಮಶಾಸ್ತ್ರ ನಿಯಮಗಳಿಲ್ಲದೇ ಪ್ರಕಟವಾಗಿದೆ. ಅದು ಮೋಶೆಯ ಧರ್ಮಶಾಸ್ತ್ರದಿಂದಲೂ ಪ್ರವಾದಿಗಳ ನುಡಿಗಳಿಂದಲೂ ಸಾಕ್ಷಿಗೊಂಡಿರುತ್ತದೆ. ದೇವರಿಂದಾಗವ ಆ ನೀತಿಯು ಯಾವದಂದರೆ ಯೇಸು ಕ್ರಿಸ್ತನನ್ನು ನಂಬುವದರಿಂದಲೇ ನಂಬುವವರೆಲ್ಲರಿಗೆ ದೊರಕುವಂಥದು. ಹೆಚ್ಚು ಕಡಿಮೆ ಏನೂ ಇಲ್ಲ. ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ. ಅವರು ನೀತಿ ವಂತರೆಂದು ನಿರ್ಣಯ ಹೊಂದುವದು ದೇವರ ಉಚಿತಾರ್ಥವಾದ ಕೃಪೆಯಿಂದಲೇ ಕ್ರಿಸ್ತ ಯೇಸುವಿನಿಂದಾದ ಪಾಪ ವಿಮೋಚನೆಯ ಮೂಲಕವಾಗಿ ಆಗುವದು. ಈತನು ತನ್ನ ರಕ್ತವನ್ನು ಸುರಿಸಿ ನಂಬಿಕೆಯಿದ್ದವರಿಗಾಗಿ ಕೃಪಾಧಾರವಾಗಬೇಕೆಂದು ದೇವರು ಈತನನ್ನು ಮುಂದಿಟ್ಟನು (ರೋಮಾಪುರ 3:19-25).

ಯಾಕಂದರೆ ಯಾವನಾದರೂ ಧರ್ಮಶಾಸ್ತ್ರವನ್ನೆಲ್ಲಾ ಕೈಕೊಂಡು ನಡೆದು ಒಂದೇ ಒಂದರಲ್ಲಿ ತಪ್ಪಿದರೆ ಅವನು ಎಲ್ಲಾ ವಿಷಯದಲ್ಲಿಯೂ ಅಪರಾಧಿಯಾಗುತ್ತಾನೆ. ವ್ಯಭಿಚಾರಮಾಡಬಾರದೆಂದು ಹೇಳಿದವನೇ ನರಹತ್ಯಮಾಡಬಾರದೆಂತಲೂ ಹೇಳಿದನು. ಆದಕಾರಣ ನೀನು ವ್ಯಭಿಚಾರಮಾಡದೆ ಇದ್ದರೂ ನರಹತ್ಯಮಾಡಿದರೆ ಧರ್ಮಪ್ರಮಾಣವನ್ನು ಮೀರಿದವನಾದಿ (ಯಾಕೋಬ 2:10, 11).

ದಶಾಜ್ಞೆಗಳಲ್ಲಿರುವ ನಿಯಮಾವಳಿಗಳು, ಪಾಪದ ಕುರಿತಾಗಿ ಅರಿಯಲು ಅಗತ್ಯವಿರುವ ಸಾಧನವಾಗಿತ್ತು; ಆದರೆ ಪಾಪದಿಂದ ಬಿಡಿಸಲು ಅದು ಅಸಾಧ್ಯವಾಗಿತ್ತು; ಆಜ್ಞೆಗಳನ್ನು ಪಾಲಿಸುವದರ ಮೂಲಕ ರಕ್ಷಣೆ ಹೊಂದುತ್ತೇವೆ ಎನ್ನುವದು ವ್ಯರ್ಥವಾದ ಆಲೋಚನೆ ಯಾಗಿದೆ. ಖಾಯಿಲೆಯನ್ನು ಕಂಡುಹಿಡಿಯುವದು ಸ್ವಸ್ಥತೆಯಲ್ಲ. ಆಜ್ಞೆಯು ಮೂಲಕ "ಪಾಪ" ಯಾವದೆಂದು ಅರಿಯಬಹುದು. ಯೇಸು ಕ್ರಿಸ್ತನೇ ಅದರ ಪರಿಹಾರಕನು. ದಶಾಜ್ಞೆಗಳನ್ನು ಕೇಳುವದರಿಂದ ನಾವು ಕ್ರಿಸ್ತನ ಶಿಲುಬೆಯ ಕಡೆಗೆ ಹೋಗಬಹುದು, ಅಲ್ಲಿ ನಮಗೆ ರಕ್ಷಣೆ ದೊರೆಯುತ್ತದೆ ವಿನಃ, ಅದನ್ನು ಪಾಲಿಸುವದರಿಂದ ದೊರೆಯುವದಿಲ್ಲ.

ದೇವರು ತನ್ನ ಧರ್ಮಶಾಸ್ತ್ರವನ್ನು ನೀಡಲು ಇಸ್ರಾಯೇಲ್ಯರನ್ನು ಸೀನಾಯಿ ಬೆಟ್ಟದ ತಪ್ಪಲಲ್ಲಿ ಒಂದುಗೂಡಿಸಿದಾಗ, ಮೋಶೆಯೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡಾಗ, ಅದಕ್ಕೆ ಪ್ರಾಥಮಿಕ ನಿರ್ಬಂಧಗಳನ್ನು ವಿಧಿಸಿದಾಗ ನಂತರ ಅವನು ಅವುಗಳನ್ನು ಜನರಿಗೆ ತಿಳಿಯಪಡಿಸಿದನು. ವಿಮೋಚನಕಾಂಡ 19:5, 6ಎ ರಲ್ಲಿ ಆ ನಿರ್ಬಂಧಗಳನ್ನು ತಿಳಿಸಲಾಗಿದೆ: ಹೀಗಿರಲಾಗಿ ನೀವು ನನ್ನ ಮಾತನ್ನು ಶ್ರದ್ಧೆಯಿಂದ ಕೇಳಿ ನಾನು ಮಾಡುವ ನಿಬಂಧನೆಗಳನ್ನು ಅನುಸರಿಸಿ ನಡೆದರೆ ನೀವು ಎಲ್ಲಾ ಜನಾಂಗಗಳಲ್ಲಿ ನನಗೆ ಸ್ವಕೀಯ ಜನರಾಗಿರುವಿರಿ: "ಸಮಸ್ತ ಭೂಮಿಯೂ ನನ್ನದಷ್ಟೆ. ನೀವು ನನಗೆ ಯಾಜಕ ರಾಜ್ಯವೂ ಪರಿಶುದ್ಧ ಜನವೂ ಆಗಿರುವಿರಿ. ಈ ಮಾತುಗಳನ್ನು ಕೇಳಿದ ಜನರೆಲ್ಲರು ಕರ್ತನು ಹೇಳಿದಂತೆಯೇ

ಮಾಡುವೆವು ಎಂದು ಒಗ್ಗಟ್ಟಾಗಿ ಪ್ರತ್ಯುತ್ತರ ನೀಡಿದರು!" (ವಿಮೋಚನಕಾಂಡ 19:8ಎ). ಈ ವಿಧವಾದ ಸಮರ್ಪಣೆ ಹಾಗೂ ವಿಧೇಯತೆಯ ಮುಖಾಂತರ ನಾವು ದೈವ ಒಡಂಬಡಿಕೆಯ ಸಂಬಂಧಕ್ಕೆ ಸೇರ್ಪಡೆಯಾಗಬಹುದು. "ಮಾಡಬೇಕಾದ" ಹಾಗೂ ಮಾಡಬಾರದ ಸಂಗತಿ ಗಳನ್ನು ಪಟ್ಟಿ ಮಾಡಿ ಧರ್ಮಶಾಸ್ತ್ರದ ಮುಖಾಂತರ ಇಸ್ರಾಯೇಲ್ಯರು ಪ್ರೀತಿಯಿಂದಲೂ, ಯಥಾರ್ಥತೆಯಿಂದಲೂ ದೇವರ ಒಡಂಬಡಿಕೆಯ ಅನ್ಯೋನ್ಯತೆಗೆ ಸೇರ್ಪಡೆ ಗೊಂಡರು. ಈ ದಿನಗಳಲ್ಲಿಯೂ ಸಹ, ಯೇಸು ಕ್ರಿಸ್ತನಲ್ಲಿ ದೇವರ ಒಡಂಬಡಿಕೆಯ ಅನ್ಯೋನ್ಯತೆಗೆ ಸಾಗುವವರಾಗಿದ್ದೇವೆ, ಇದರಲ್ಲಿ ಯಾವುದೇ ವಿಧವಾದ ಹಿನ್ನೆಲೆ, ಜನಾಂಗವೂ ಅಥವಾ ಪಾಪಗಳ ಅಡ್ಡಿ ಇರುವದಿಲ್ಲ ದೇವರೇ ಮಾತನಾಡಿರುವನು ನಾವು ವಿಧೇಯರಾಗಿರೋಣ?

---

ಟಿಪ್ಪಣಿ

[1]All of these statements appeared on a website whose authors described themselves as "religious liberals" (www.sea1fd.hotmail.msn.com; Internet; accessed May 2009). While the information on this site is no longer available, some of the same statements and many similar ones may be found at http://www.religioustolerance.org/chr_10cn.htm; Internet; accessed 3 February 2010.

---

## ಸಬ್ಬತ್

ವಿಮೋಚನಕಾಂಡ 20:9, 10 ರಲ್ಲಿ ವಾರದ ಏಳನೆಯ ದಿನವೇ ಸಬ್ಬತ್ ದಿನ ಎಂದು ಸ್ಪಷ್ಟವಾಗಿದೆ. ಅದು ಸೃಷ್ಟಿಯಲ್ಲಿ ದೇವರು ಏಳನೆಯ ದಿನದಲ್ಲಿ ವಿಶ್ರಾಂತಿ ಪಡೆದ ದಿನಕ್ಕೆ ಹೋಲಿಕೆಯಾಗಿದೆ (ಆದಿಕಾಂಡ 2:2, 3). ಆದರೆ ದೇವರು ಆಯಾಸಗೊಂಡನು ಎಂಬದಾಗಿರದೇ ಆತನು ತನ್ನ ಸೃಷ್ಟಿಯ ಕಾರ್ಯವನ್ನು ಅಂತ್ಯಗೊಳಿಸಿದನು ಎಂಬ ಅರ್ಥ ವಾಗಿದೆ. ದೇವರು ಸೃಷ್ಟಿ ಕರ್ತನು ಮತ್ತು ಕಾಯುವವನೂ ಆಗಿರುವನು. ಇಸ್ರಾಯೇಲ್ಯರು ಯಾವ ಕೆಲಸವನ್ನು ಮಾಡದೆ ಸಬ್ಬತ್ ದಿನವನ್ನು ಆಚರಿಸಬೇಕಿತು. ಧರ್ಮೋಪದೇಶಕಾಂಡ 5:15ರಲ್ಲಿ ಇಸ್ರಾಯೇಲ್ಯರು ಐಗುಪ್ತದಲ್ಲಿ ದಾಸರಾಗಿದ್ದರು, ಆದ್ದರಿಂದ ಅವರಿಗೆ ವಿಶ್ರಾಂತಿಯ ಅಗತ್ಯವಿತ್ತು ಎಂಬ ನೆನಪು ಸಬ್ಬತ್ ಆಚರಣೆಯಲ್ಲಿತ್ತು.

"ಸಬ್ಬತ್‌ನ್ನೂ ನೆನಪು ಮಾಡಿ" ಅದನ್ನು "ಪರಿಶುದ್ಧವೆಂದೆಣಿಸುವದು," ಅದು ವಿಶೇಷವಾಗಿದ್ದು, ದೇವರಿಗೆ ಮೀಸಲಾದ ದಿನವಾಗಿತ್ತು. ಈ ದಿನದ ಆಸಡ್ಡೆಯು, ದೇವರು ಅವರೊಂದಿಗೆ ಮಾಡಿಕೊಂಡಿದ್ದ ಒಡಂಬಡಿಕೆಗೆ ವಿರುದ್ಧವಾಗಿತ್ತು (ವಿಮೋಚನಕಾಂಡ 31:12-17).

ಯೇಸುವಿನ ಕಾಲದಲ್ಲಿ ಈ ದಿನವು ಬಹಳ ಪ್ರಾಮುಖ್ಯತೆ ಹೊಂದಿ, ಪರಿಶುದ್ಧವೆಂದು ಪರಿಗಣಿಸಲ್ಪಟ್ಟಿತ್ತು ಮತ್ತು ಮೂಢ ನಂಬಿಕೆಯೂ ಆಗಿತ್ತು. "ಆ ದಿನದಲ್ಲಿ ನೀನು ಕೆಲಸ ಮಾಡಬಾರದು" ಎಂಬ ತತ್ವವು ಬಹಳ ಗಂಭೀರವಾಗಿತ್ತು (ವಿಮೋಚನಕಾಂಡ 20:10). ಆ ದಿನದಲ್ಲಿ ರೋಗಿಗಳಿಗೆ ಸಹಾಯ ಮಾಡುವದು ಹಾಗು ಇತರರಿಗೆ ಸಹಾಯ ಮಾಡುವದು ಸಹ ಅಪಾಯಮಾನವಾಗಿತ್ತು. ಯೇಸು ಸಹ ಧಾರ್ಮಿಕ ಜನರೊಂದಿಗೆ ಭಿನ್ನಾಭಿಪ್ರಾಯ ಹೊಂದಿದ್ದ ಅದು ವಿಮೋಚನಕಾಂಡದಲ್ಲಿನ ಸಬ್ಬತ್ ಆಚರಣೆಯ ಕುರಿತಾಗಿರದೇ, ಆದರೆ ಅದರಲ್ಲಿದ್ದ ನಿಯಮಗಳನ್ನು ಆತನು ಪಾಲಿಸದೇ ಇದ್ದರಿಂದ, ಮುಖ್ಯವಾಗಿ ಫರಿಸಾಯರು ಆತನನ್ನು ಖಂಡಿಸಿದರು (ಉದಾಹರಣೆ ಮಾರ್ಕ 3:1-6; ಲೂಕ 13:10-17; ಯೋಹಾನ 5:1-16; 9:1-41). ಯೇಸು ಮತ್ತು ಆತನ ಶಿಷ್ಯರು ಈ ನಿಯಮಗಳನ್ನು ಮೀರಿದ ಕಾರಣ, ಯೇಸು ಎರಡು ಸತ್ಯಗಳನ್ನು ಪ್ರಕಟಪಡಿಸಿದನು: "ಸಬ್ಬತ್ ಮನುಷ್ಯನಿಗಾಗಿ ಇದೆಯೇ ವಿನಃ, ಮನುಷ್ಯನು ಸಬ್ಬತ್‌ಗಾಗಿ ಅಲ್ಲ" ಎಂಬದೆ (ಮಾರ್ಕ 2:23-28).

ದಶಾಜ್ಞೆಗಳಲ್ಲಿ, ಸಬ್ಬತ್ ಕಟ್ಟಳೆಯು ಪುನರಾವರ್ತಿಸಿರುವದಿಲ್ಲ (ಅಪ್ಪಣೆಯಾಗಿ) ಹಾಗೂ ಹೊಸ ಒಡಂಬಡಿಕೆಯಲ್ಲೂ ತಿಳಿಸಿರುವದಿಲ್ಲ. ಆದರೆ ಆದಿ ಸಭೆಯವರು ವಾರದ ಮೊದಲನೆಯ ದಿನದಲ್ಲಿ (ಭಾನುವಾರ) ಆರಾಧನೆಗೆ ಕೂಡಿ ಬರುತ್ತಿದ್ದರು. ಅದನ್ನು "ಕರ್ತನ ದಿನವೆಂದು" ಕರೆಯುತ್ತಿದ್ದರು (ಅಪೊಸ್ತಲರು 20:7; 1 ಕೊರಿಂಥ 16:1, 2; ಪ್ರಕಟಣೆ 1:10). ಈ ದಿನ ಅದು ಕರ್ತನ ಪುನರುತ್ಥಾನದ ದಿವಸವಾಗಿದ್ದರಿಂದ, ಅದನ್ನು ಆಯ್ಕೆಮಾಡಿಕೊಂಡರು. ಯೆಹೂದ್ಯರಿಂದ ಪ್ರತ್ಯೇಕವಾದವರು ಎಂಬ ಸೂಚನೆಗಾಗಿ, ಆದಿ ಕ್ರೈಸ್ತರು ವಾರದ ಮೊದಲನೆಯ ದಿನವನ್ನು ಆಚರಿಸಿ, ತಮ್ಮದೇ ಆದ ಛಾಪನ್ನು ತೋರಿದರು.

ಪ್ರಚಲಿತ ಕಾಲದಲ್ಲಿ ಕರ್ತನ ದಿನವನ್ನು ಸಬ್ಬತ್ ಎಂದು ಕರೆಯುವದಿಲ್ಲ. ನಂತರದ ಕ್ರೈಸ್ತರ ಇತಿಹಾಸದಲ್ಲಿ "ಕ್ರೈಸ್ತರ ಸಬ್ಬತ್" ಎಂಬ ಉಪಾಯವು ಉದ್ಭವಿಸಿತು, ಆ ಸಮಯದಲ್ಲಿ ಸಬ್ಬತ್‌ನ್ನು ಆಚರಿಸಬೇಕೆಂಬ ಒತ್ತಾಯ ಉಂಟಾಗಿತ್ತು (ಪ್ರಾಥಮಿಕವಾಗಿದ್ದರು ಕಾರ್ಯಗತವಾಗಿರಲಿಲ್ಲ) ಇತರೆ ಕ್ರೈಸ್ತರು ಭಾನುವಾರ ಆಚರಣೆ ಮಾಡುತ್ತಿದ್ದರು. ಇದರಲ್ಲಿ ವ್ಯತ್ಯಾಸವುಳ್ಳ ಎರಡು ಗೊಂದಲಗಳುಹಾಗೂ ಪ್ರತ್ಯೇಕವಾದ ಒಡಂಬಡಿಕೆಯ ವ್ಯತ್ಯಾಸಗಳು ಒಳಗೊಂಡಿವೆ. ಆದಾಗ್ಯೂ ಈ ಎರಡರಲ್ಲೂ ದೇವರಿಗಾಗಿ ಪ್ರತ್ಯೇಕವಾಗಿಡುವ ಸಮಯದ ಉದ್ದೇಶಗಳೇ ಇರುತ್ತವೆ.